# ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **78/2018**

ಚಾಸಾಃ **4** ಅಸಾಃ **3**

| | |
|---|---|
| ಹೆಸರುಃ | ಪೂಜಾ |
| ತಂದೆಯ / ಗಂಡನ ಹೆಸರು : | ವೆಂಕಟೇಗೌಡ |
| ವಯಸ್ಸು: | 24 ವರ್ಷ |
| ಕೆಲಸಃ | ಎಲ್ ಐ ಸಿ ಕಚೇರಿಯಲ್ಲಿ |
| ವಾಸಸ್ಥಳ | ಹಾಸನ |

ದಿನಾಂಕಃ **04/11/2023** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನನ್ನ ಸ್ವಂತ ಊರು ಭಕ್ತರವಳ್ಳಿ ಆಲೂರು ತಾಲ್ಲೂಕು. ಆರೋಪಿ ನನಗೆ ಗೊತ್ತು. ಅವರು ನಮ್ಮ ಗ್ರಾಮದವರು. ಆರೋಪಿ ಒಕ್ಕಲಿಗ ಜಾತಿಗೆ ಸೇರಿದವರಿರುತ್ತಾರೆ. ನಾನು ಕೂಡ ಒಕ್ಕಲಿಗ ಜಾತಿಯ ಸದಸ್ಯನಿರುತ್ತೇನೆ. ಚಾಸಾ–3 ನನ್ನ ತಾತಾ ಇದ್ದು, 2021 ರಲ್ಲಿ ತೀರಿ ಹೋಗಿರುತ್ತಾರೆ. ಚಾಸಾ–1 ಮತ್ತು 2 ಗೊತ್ತಿದ್ದು, ಅವರು ಮೇರ್ವೆ ಗ್ರಾಮದವರಿರುತ್ತಾರೆ. ಅವರು ಪರಿಶಿಷ್ಟ ಜಾತಿಯ ಸದಸ್ಯರಿರುತ್ತಾರೆ. ನಮ್ಮ ಊರಿಗೂ ಮೇರ್ವೆ ಗ್ರಾಮಕ್ಕೂ ನಡೆಯುತ್ತಾ ಹೋದರೆ 15 ನಿಮಿಷ ಬೇಕಾಗುತ್ತದೆ. ನಮ್ಮ ಊರಿನಿಂದ ಹೊನ್ನೇನಹಳ್ಳಿ ಗೇಟಿಗೆ ನಡೆಯುತ್ತಾ ಹೋದರೆ 20 ನಿಮಿಷ ಬೇಕಾಗುತ್ತದೆ.

2. ಚಾಸಾ–2 ನಮ್ಮ ಊರಿಗೆ ಬಂದು ಹೊನ್ನೇನಹಳ್ಳಿಗೆ ಬಂದು ಬಸ್ಸು ಹತ್ತುತ್ತಾರೆ. 2017 ರಲ್ಲಿ ನಾನು ಹಾಸನದಲ್ಲಿ ಮಹಿಳಾ ಕಾಲೇಜಿನಲ್ಲಿ ಪಧವೀ

ಓದುತ್ತಿದ್ದೆ. ಚಾಸಾ–2 2017 ರಲ್ಲಿ ಆಲೂರು ಕಾಲೇಜಿನಲ್ಲಿ ಓದುತ್ತಿದ್ದರು. ಚಾಸಾ–2 ಕಾಲೇಜಿಗೆ ಬಂದು ಹೋಗಿ ಮಾಡುವುದರಿಂದ ಗೊತ್ತು.

3. ದಿ. 12.10.2017 ರಂದು ಸಂಜೆ 4.45–5.00 ಗಂಟೆಗೆ ಹೊನ್ನೇನಹಳ್ಳಿ ಕ್ರಾಸಿನಿಂದ ಬಸ್ ಇಳಿದು ನಾನು ಮತ್ತು ಚಾಸಾ–2 ನಡೆಯುತ್ತಾ ಬರುತ್ತಿದ್ದೆವು. ಆರೋಪಿ ಬೈಕಿನಲ್ಲಿ ನಮ್ಮ ಹಿಂದೆ ಬರುತ್ತಿದ್ದರು. ಆರೋಪಿ ನನ್ನನ್ನು, ನನ್ನ ಅಕ್ಕ ಏನು ಓದುತ್ತಿರುವುದು ಎಂದು ಮಾತನಾಡಿಸಲು ಪ್ರಯತ್ನಿಸಿದರು. ನಾನು ಆರೋಪಿ ಜೊತೆ ಮಾತನಾಡಲಿಲ್ಲ. ನಾನು ಮತ್ತು ಚಾಸಾ–2 ರವರು ವೇಗವಾಗಿ ನಡೆಯುತ್ತಾ ಬಂದೆವು. ಚಾಸಾ–2 ಮಣ್ಣಿನ ದಾರಿಯಲ್ಲಿ ಅವರ ಊರಿಗೆ ಹೋಗಲು ಹೊರಟರು. ನಾನು ನಮ್ಮ ಊರಿಗೆ ಮುಖ್ಯ ರಸ್ತೆಯಲ್ಲಿ ಹೋದೆ.

4. ಆರೋಪಿ ನನ್ನ ಹಿಂದೆ ಬೈಕಿನಲ್ಲಿ ಬಂದು ಮಾತನಾಡಲು ಪ್ರಯತ್ನಿಸಿದರು. ಅದರೆ ನಾನು ಆರೋಪಿ ಜೊತೆ ಮಾತನಾಡಲಿಲ್ಲ. ನಾನು ಮನೆಗಳು ಹತ್ತಿರ ಇರುವುದರಿಂದ ವೇಗವಾಗಿ ನಡೆಯುತ್ತಾ ಹೋದೆ. ಆರೋಪಿ ಬೈಕಿನಲ್ಲಿ ನಮ್ಮ ಊರಿನ ಕಡೆಗೆ ವೇಗವಾಗಿ ಹೋದರು. ನಮ್ಮ ಅಜ್ಜ ರಾಮೇಗೌಡ ವ್ಯವಸಾಯ ಮತ್ತು ದನ ಮೇಯಿಸುವ ಕೆಲಸ ಮಾಡುತ್ತಿದ್ದರು.

5. ಅದೇ ದಿನ ಸಂಜೆ 6.15 ಕ್ಕೆ ನಮ್ಮ ತಾತ ದನಗಳ ಜೊತೆ ಮನೆಗೆ ಬಂದರು. ಚಾಸಾ–2 ರವರು ಕೂಡ ಅಳುತ್ತಾ ನಮ್ಮ ಮನೆಗೆ ಬಂದರು. ಚಾಸಾ–3 ಚಾಸಾ–2 ರವರನ್ನು ಸಮಾಧಾನ ಮಾಡಿದರು. ನಾನು ಚಾಸಾ–2 ರವರನ್ನು ಕೇಳಿದಾಗ ಹೇಳಿದ್ದೇನೆಂದರೆಃ ಆರೋಪಿ ಚಾಸಾ–2 ರವರನ್ನು ಹಿಂಭಾಲಿಸಿ, ಎಡೆನಹಳ್ಳಿ ಹತ್ತಿರ ಒಂದು ಜಮೀನಿನಲ್ಲಿ ಆರೋಪಿ ಚಾಸಾ–2

ರವರನ್ನು ಅಡ್ಡ ಹಾಕಿ ಹಿಂಸೆ ಮಾಡಿದರು ಅಂತಾ ಹೇಳಿದರು. ಚಾಸಾ–2 ರವರು ಪುನಃ ಹೇಳಿದ್ದೇನೆಂದರೆಃ ಆರೋಪಿ ಚಾಸಾ–2 ರವರಿಗೆ ಮಾನಭಂಗಕ್ಕೆ ಪ್ರಯತ್ನ ಮಾಡಿದರು ಅವಳು ಓಡಿ ಹೋಗಿರುತ್ತಾಳೆ.

6. ನನ್ನ ತಾತ ಅವಳ ಬ್ಯಾಗ್ ಮತ್ತು ಸ್ವೆಟರ್ ನೋಡಿ ಕೂಗಿ ಕರೆದಾಗ, ಆರೋಪಿ ಚಾಸಾ–2 ರವರ ಬಾಯಿ ಮುಚ್ಚಿ ಅವಳಿಗೆ ಕುತ್ತಿಗೆಯ ಹತ್ತಿರ ಏಟಾಯಿತು ಎನ್ನುವ ವಿಷಯ ಚಾಸಾ–2 ರವರಿಂದ ಗೊತ್ತಾಯಿತು. ಸದರಿ ದ್ವಿಚಕ್ರ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಅದರ ನಂಬರ್ ಗೊತ್ತಿಲ್ಲ. ಸಾಕ್ಷಿ ಮುಮಾ–1 ಚಾಸಾ–2 ರವರಿಗೆ ಸೇರಿರುತ್ತದೆ. ಮುಮಾ–2 ಆರೋಪಿಗೆ ಸೇರಿರುತ್ತದೆ. ಮುಮಾ–3 ಬೈಕನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

7. ನನ್ನ ತಂದೆ ಚಾಸಾ–1 ರವರಿಗೆ ಫೋನ್ ಮಾಡಿ ಘಟನೆ ವಿಷಯ ತಿಳಿಸಿದರು. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್ ಆರ್ ಕೆ ವಕೀಲರಿಂದಃ</u>

ಆರೋಪಿ ಪರ ವಕೀಲರು ಗೈರು ಹಾಜರು. ಯಾವುದೇ ಮನವಿ ಪ್ರಾರ್ಥನೆ ಇಲ್ಲ. ಆರೋಪಿ ಈ ಸಾಕ್ಷಿಗೆ ಪಾಟೀ ಸವಾಲು ಮಾಡಲು ತಯಾರಿರುವುದಿಲ್ಲ. ಆದ್ದರಿಂದ ಆರೋಪಿ ಪರ ಪಾಟೀ ಸವಾಲು ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ